ಪುಟ ಬಂಗಾರ

# ವೆಂಕಣ್ಣಯ್ಯನವರ ವ್ಯಕ್ತಿತ್ವ

## ತ.ಸು. ಶಾಮರಾಯ

ಕವಿ ಕೆ.ಎಸ್. ನರಸಿಂಹಸ್ವಾಮಿಯವರು ವೆಂಕಣ್ಣಯ್ಯನವರ ಅಭೌತಿಕ, ಆಧ್ಯಾತ್ಮಿಕ ವ್ಯಕ್ತಿತ್ವದ ಚಿತ್ರವನ್ನು ತಮ್ಮ ಕವಿಸಹಜ ವಾಣಿಯಿಂದ ಹೀಗೆ ಚಿತ್ರಿಸಿದ್ದಾರೆ: ''ಒಬ್ಬರಿದ್ದರು ಕಲ್ಪವೃಕ್ಷದಂತೆ ಎತ್ತರವಾಗಿ, ತಂಪಾಗಿ, ಪ್ರಬಲವಾಗಿ, ಕಣ್ತುಂಬ ಪ್ರೀತಿ, ಮನಸ್ಸು ಎತ್ತರದಲ್ಲಿ ಜಯಶಾಲಿಯಾಗಿ ಕೆಲಸ ಮಾಡುತ್ತಿತ್ತು. ಹೊರನೋಟಕ್ಕೆ ಮರೆಯದ ಜೀವ ಒಳಗೇ ಮಿಂಚಿನ ಲಾಳಿಯಂತೆ ದುಡಿದು ಸಾರಸ್ವತ ಪೀತಾಂಬರಗಳನ್ನೇ ಸಿದ್ಧಪಡಿಸುತ್ತಿತ್ತು. ಎಂಥ ಅಚ್ಚುಕಟ್ಟು! 'ಕೃಷ್ಣಾರ್ಪಣಮಸ್ತು' ಎನ್ನುವುದು ಸುಮ್ಮನೆ ಬಾಯಿ ಮಾತಾಗದೆ ಮಾಡಿದ ಕೆಲಸದಲ್ಲಿ ಒಡಮೂಡಿತ್ತು. ಆಡಿದ ಮಾತು ಅಟ್ಟಡುಗೆಯಂತೆ ಖಚಿತ. ತನ್ನ ಕೆಲಸದ ಗುರು, ಗುರಿ, ಸಿದ್ಧಿ, ಸಾಧನೆ, ಎಲ್ಲವೂ ತಾನೇ ತನ್ನ ಆನಂದವೇ. ಆ ಪ್ರತಿಭೆಯಿಂದ ಬರೆದು ಬಂದದ್ದು ಒಂದೋ ಎರಡೋ ಮುತ್ತಿನಹಾರವಾಯಿತೇ ಹೊರತು, ಭೂಮಿಗೆ ಭಾರವಾಗಲಿಲ್ಲ. ಅದೆಂಥ ಗಾಂಭೀರ್ಯ! ತನ್ನ ಕೃತಿಗಿಂತ ತನ್ನ ಮಹಿಮೆ ಹಿರಿದಾಯಿತು; ಮಾಡಿದ ಕೆಲಸಕ್ಕಿಂತ ಮಾಡಿಸಿದ ಕೆಲಸವೇ ಮುಂದಾಯಿತು. ಒಬ್ಬರ ಧ್ವನಿಯಲ್ಲಿ, ಇನ್ನೊಬ್ಬರ ಶೈಲಿಯಲ್ಲಿ, ಮತ್ತೊಬ್ಬರ ರೀತಿಯಲ್ಲಿ, ಮಗದೊಬ್ಬರ ಬಾಳಡೆಯಲ್ಲಿ ಆ ಜೀವ ಸೇರಿಹೋಯಿತು. ಕಬ್ಬಿನ ಗದ್ದೆಯಲ್ಲಿ ಕಣ್ಮರೆಯಾದ ನವಿಲಿನಂತೆ ಆ ಜೀವ ಹಾರಿಹೋಯಿತು. ಭೂಮಿಯ ಮೇಲೆ ತನ್ನ ಕಿರಣಗಳನ್ನೆಲ್ಲ ಎಂದೋ ಏಕೋ ಮರೆತು ಮುಳುಗಿದ ರವಿಯಂತೆ ಆ ಜೀವ ಬಾನಿಗೆ ಸೇರಿಹೋಯಿತು. ತಾನೇ ಮಾಡಬೇಕಾಗಿದ್ದ ಎಷ್ಟೋ ಕೆಲಸ ಇನ್ನೂ ಬಹಳವಿದ್ದಾಗ, ತನ್ನ ಕಾರ ಸಮೃದ್ಧಿಯ ನಡುವೆ, ತಾನೊಂದು ಮಾತ್ರ ಕಣ್ಮರೆಯಾಯಿತು. ಒಂದು ದೊಡ್ಡ ಬದುಕು ಕಣ್ಮರೆಯಾಯಿತು. ನಿರ್ಭಯವಾಗಿ, ನಿರಾತಂಕವಾಗಿ ತಗ್ಗು, ಎತ್ತರ, ಬನ, ಬಯಲು, ನೆರಳು, ಬೆಳಕುಗಳನ್ನೆಲ್ಲ ಸಮವಾಗಿ ಆಧರಿಸಿದ ಅದರ ಸಮತಾ ವೇದಸ್ವ ವಾಚನ: 'ನಮೋ ಮಹದ್ದ: ನಮೋ ಯುವಭ; ನಮೋ ಅರ್ಭಕೇಭ್ಯಃ' — ಇದರಂತೆ ನಡೆದು ಹಿರಿಯರಾದವರಲ್ಲಿ ಎತ್ತರವಾದ ಆಳು ದಿವಂಗತ ವೆಂಕಣ್ಣಯ್ಯನವರು. ಬಹುಕಾವ್ಯ ಪರಿಚಯವಿದ್ದೂ ಬರವಣಿಗೆಗಿಂತ ಆಲೋಚನೆ, ಆಲೋಚನೆಗಿಂತ ಜೀವನ ದೊಡ್ಡದು ಎಂದು ಆ ಜೀವ ನಂಬಿದ್ದಂತೆ ತೋರುತ್ತದೆ. ಈ ಮಾತನ್ನು ಅದು ಸ್ಪಷ್ಟವಾಗಿ ಹೇಳಲಿಲ್ಲ. ಅದಲ್ಲವೇ ಆ ಜೀವನದ ಸಂಸ್ಕೃತಿ! ಪ್ರಾಚೀನ ಸಾಹಿತ್ಯದ ಸೌಂದರ್ಯವನ್ನು ಕಂಡು, ಹೃದಯದಲ್ಲಿ ತುಂಬಿಕೊಂಡು, ಆಗತಾನೆ ನಮ್ಮ ಕಣ್ಣೆದುರಿಗೆ ಅಂಕುರಿಸುತ್ತಿದ್ದ ಒಂದು ಹೊಸ ರೀತಿಯ ಸಾಹಿತ್ಯ ಸೃಷ್ಟಿಗೆ ಬೆಂಬಲವಾಗಿ ನಿಂತು, ಅದಕ್ಕೆ ಸರ್ವಶಕ್ತಿಯನ್ನೂ ದಾನ ಮಾಡಿದ ಹಿರಿಯರ ಪಂಕ್ತಿಯಲ್ಲಿ ಎತ್ತರವಾದ ಆಳು ವೆಂಕಣ್ಣಯ್ಯನವರು. ಇಂದು ಬೆಳಗುತ್ತಿರುವ ಎಷ್ಟೋ ದೀಪಗಳಲ್ಲಿ ಇವರ ಬೆಳಕು. ಸಾಹಿತ್ಯದಲ್ಲಿ ಕ್ರಾಂತಿಯಾದದ್ದೂ ಇಂಥವರ ಇರುವಿಕೆಯಿಂದಲೇ ಹೊರತು ಪ್ರಯತ್ನದಿಂದಲ್ಲ. ಆಜ್ಞೆಗೆ ಒಳಗಾಗದೆ, ಆಜ್ಞೆ ಮಾಡದೆ ಎಷ್ಟೋ ಕೆಲಸ